ಮನುಷ್ಯನಾಗಿದ್ದ ಎಂದರೆ, ಪ್ರತಿಯೊಬ್ಬ ಅಕ್ಕಸಾಲಿ ಕೂಡ ಟಂಕಸಾಲೆ ಮಾಡಿಕೊಂಡ. ಅವನು ಆ ರೀತಿ ಹೇಳಿದ....

(ಅಡಚಣೆ)

ಉಪಾಧ್ಯಕ್ಷರು: ಮಾನ್ಯ ಮಹದೇವ್ ಅವರ ಪ್ರಶ್ನೆಗೆ ಉತ್ತರ ಸಿಗಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್: ಅದನ್ನೇ ಹೇಳುತ್ತೇನೆ. ಜಾಗೃತ ಸಮಿತಿಯ ಅಧ್ಯಕ್ಷರಾದಂತಹ ಶಾಸಕರು, ಯಾವ ಲಿಸ್ಟ್ ಬಂದಿರುತ್ತದೋ, ಆ ಲಿಸ್ಟಿನ ಪ್ರಕಾರ ಅನರ್ಹರಾಗತಕ್ಕಂಥ ಫಲಾನುಭವಿಗಳನ್ನು ತೆಗೆದು ಹಾಕತಕ್ಕಂಥ ಅಧಿಕಾರ ಇವತ್ತಿನವರೆಗೂ ಅವರಿಗೆ ಇದೆ. ನಾಳೆ ತಿದ್ದುಪಡಿಯಾದ ಮೇಲೆ, ಬೇರೆ ರೀತಿಯಲ್ಲಿ ತಾವು ಯೋಚನೆ ಮಾಡಬಹುದು.

(ಅಡಚಣೆ)

ಉಪಾಧ್ಯಕ್ಷರು: ಈಗ ಮಾನ್ಯ ಕ್ಯಾತ್ಸಂದ್ರನ ರಾಜಣ್ಣನವರ ಗಮನ ಸೆಳೆಯುವ ಸೂಚನೆ.

(ಅಡಚಣೆ)

ಉಪಾಧ್ಯಕ್ಷರು: ಈಗಾಗಲೇ ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ದಯವಿಟ್ಟು ಎಲ್ಲಾ ಕುಳಿತುಕೊಳ್ಳಿ.

(ಊ) ವಿಷಯ: ಗ್ರಾನ್ಯೂಲೇಟೆಡ್ ಮಿಕ್ಸಿಂಗ್ ಪ್ಲಾಂಟನ್ನು ರಾಜ್ಯ ಸಹಕಾರ ಮಾರಾಟ ಮಹಾಮಂಡಳಕ್ಕೆ ಹಸ್ತಾಂತರಿಸುವಲ್ಲಿ ವಿಳಂಬವಾಗಿರುವ ಬಗ್ಗೆ.

ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ(ಬೆಳ್ಳಾವಿ): ಮಾನ್ಯ ಉಪಾಧ್ಯಕ್ಷರೆ, ಗ್ರಾನ್ಯೂಲೇಟೆಡ್ ಮಿಕ್ಸಿಂಗ್ ಪ್ಲಾಂಟನ್ನು ರಾಜ್ಯ ಸಹಕಾರ ಮಾರಾಟ ಮಹಾಮಂಡಳಕ್ಕೆ ಹಸ್ತಾಂತರಿಸುವಲ್ಲಿ ವಿಳಂಬವಾಗಿರುವ ಬಗ್ಗೆ ಮಾನ್ಯ ಕೃಷಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಕೃಷಿ ಸಚಿವರ ಪರವಾಗಿ):- ಮಾನ್ಯ ಉಪಾಧ್ಯಕ್ಷರೆ,

ದಿನಾಂಕ 20.10.2004ರ ಸರ್ಕಾರಿ ಆದೇಶ ಸಂಖ್ಯೆ: ಎಎಚ್‌ಡಿ 30 ಎಎಫ್‌ಟಿ 2004ರ ಪ್ರಕಾರ ಕೆ.ಎ.ಐ.ಸಿ.ಯ ಗ್ರಾನ್ಯುಲೇಟೆಡ್ ಮಿಕ್ಸಿಂಗ್ ಪ್ಲಾಂಟ್ (ಜಿ.ಎಂ.ಪಿ) ಯೂನಿಟ್ಟನ್ನು ಮೆ.ಕೆ.ಎಸ್.ಸಿ.ಎಂ.ಎಫ್.ಗೆ ಮಾಹೆಯಾನ ಬಾಡಿಕೆ ರೂ.1.50 ಲಕ್ಷ ಮೇರೆಗೆ ಸದರಿ ಯೂನಿಟ್ಟನ್ನು ಮಾರಾಟ ಮಾಡುವ ವಿಚಾರವನ್ನು ಕಾಯ್ದಿರಿಸಿ, ಮೂರು ತಿಂಗಳ ಅವಧಿಗೆ ಮೆ.

ಕೆ.ಎಸ್.ಸಿ.ಎಂ.ಎಫ್.ಗೆ, ನೀಡಬೇಕೆಂದು ಆದೇಶಿಸಲ್ಪಟ್ಟಿತು. ಆ ಪ್ರಕಾರ, ಆ ದಿನದಂದೇ (ದಿನಾಂಕ 20.10.2004ರಂದು) ಕೆ.ಎ.ಐ.ಸಿ.ಯು ಜಿ.ಎಂ.ಪಿ ಯೂನಿಟ್ಟನ್ನು ಮೆ. ಕೆ.ಎಸ್.ಸಿ.ಎಂ.ಎಫ್.ಗೆ ನೀಡಿರುವುದರಿಂದ, ಜಿ.ಎಂ.ಪಿ. ಯೂನಿಟ್ಟನ್ನು ಮೆ. ಕೆ.ಎಸ್.ಸಿ.ಎಂ.ಎಫ್‌ಗೆ ಹಸ್ತಾಂತರಿಸುವಲ್ಲಿ ಯಾವುದೇ ವಿಳಂಬ ಆಗಿರುವುದಿಲ್ಲ.

ತದನಂತರ ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕ 15.9.2005ರ ಸರ್ಕಾರಿ ಆದೇಶ ಸಂಖ್ಯೆ ಕೃತೋಇ 34 ಎಎಫ್‌ಟಿ 2004ರಲ್ಲಿ ಈ ಕೆಳಗೆ ಕಾಣಿಸಿದಂತಹ ಕಾರ್ಯ ನೆರವೇರಿಕೆಗಳ ಆದೇಶ ಹೊರಡಿಸಿತು.

1. ಕೆ.ಎ.ಐ.ಸಿ.ಯು ತನ್ನ ಗ್ರಾನ್ಯುಲೇಟೆಡ್ ಮಿಕ್ಸಿಂಗ್ ಪ್ಲಾಂಟ್ (ಜಿ.ಎಂ.ಪಿ) ಯೂನಿಟ್ಟನ್ನು ಮೆ.ಕೆ.ಎಸ್.ಸಿ.ಎಂ.ಎಫ್.ಗೆ, ಮಾಹೆಯಾನ ರೂ.1.50 ಲಕ್ಷ ಬಾಡಿಗೆ ಮೇರೆಗೆ, ನೀಡಿರುವ ಬಗ್ಗೆ ತೆಗೆದುಕೊಂಡಿರುವ ಕ್ರಮದ ಅನುಮೋದನೆ.

2. ಮೆ. ಟೆಕ್ಸಾಕ್ ಅವರು ನಿಗದಿಪಡಿಸಿದ ಬೆಲೆ ರೂ.190.80 ಲಕ್ಷಗಳಿಗೆ ಜಿ.ಎಂ.ಪಿ ಯೂನಿಟ್ಟನ್ನು ಮೆ. ಕೆ.ಎಸ್.ಸಿ.ಎಂ.ಎಫ್‌ಗೆ ಮಾರಾಟ ಮಾಡಲು ಅನುಮೋದನೆಗೆ ಎರಡೂ ಪಕ್ಷಗಳವರೂ, ಈ ಬಗ್ಗೆ ತ್ವರಿತ ಕ್ರಮ ಕೈಗೊಂಡು ಸರ್ಕಾರಕ್ಕೆ ಅದನ್ನು ತಿಳಿಯಪಡಿಸುವುದು.

3. ಮಾರಾಟ ಅಖೈರಾಗುವವರೆಗೆ, ಜಿ.ಎಂ.ಪಿ. ಯೂನಿಟ್ಟನ್ನು ಮೆ. ಕೆ.ಎಸ್.ಸಿ.ಎಂ.ಎಫ್.ಗೆ ಮಾಹೆಯಾನ ರೂ.1.50 ಲಕ್ಷ ಬಾಡಿಗೆ ಮೇರೆಗೆ ನೀಡಿರುವ ವ್ಯವಸ್ಥೆ ಮುಂದುವರೆಯತಕ್ಕದ್ದು.

ಕೆ.ಎ.ಐ.ಸಿ. ಸಂಸ್ಥೆಯು ಕೆ.ಎಸ್.ಸಿ.ಎಂ.ಎಫ್. ಗೆ ಸಲ್ಲಿಸಬೇಕಾದ ಹಳೆಯ ಬಾಕಿ ಹಾಗೂ ಕೆ.ಎಸ್.ಸಿ.ಎಂ.ಎಫ್, ಕೆ.ಎ.ಐ.ಸಿ ಸಂಸ್ಥೆಗೆ ಸಲ್ಲಿಸಬೇಕಾದ ಬಾಡಿಗೆಯ ಬಾಕಿ ಮುಂತಾದ ಲೆಕ್ಕಪತ್ರ ವ್ಯವಹಾರಗಳು ಅಂತಿಮವಾಗಿ ತೀರ್ಮಾನವಾಗದ ಕಾರಣ ಈ ಸಂಬಂಧ ಒಡಂಬಡಿಕೆ ಮಾಡಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಈ ವಿಷಯವನ್ನು ಸಾರ್ವಜನಿಕ ಉದ್ದಿಮೆಗಳ ಇಲಾಖೆಯು ಪರಿಶೀಲಿಸುತ್ತಿದ್ದು, ಈ ವಿಷಯವನ್ನು ತ್ವರಿತವಾಗಿ ಬಗೆಹರಿಸಲು ಸಾರ್ವಜನಿಕ ಉದ್ದಿಮೆ ಇಲಾಖೆಗೆ ನಿರ್ದೇಶಿಸಲಾಗುವುದು.

ಶ್ರೀ ಕೆ.ಎನ್. ರಾಜಣ್ಣ: ಮಾನ್ಯ ಉಪಾಧ್ಯಕ್ಷರೆ, ದಿನಾಂಕ 20.10.2004ರಲ್ಲಿ ಒಂದೂವರೆ ಲಕ್ಷ ರೂಪಾಯಿಗಳಿಗೆ ಬಾಡಿಗೆಗೆ ನೀಡಬೇಕೆಂದು ಒಂದು ಸರ್ಕಾರಿ ಆದೇಶವಾಗುತ್ತದೆ. ದಿನಾಂಕ 20.10.2004ರಂದೇ ಹಸ್ತಾಂತರ

ಕೂಡ ಮಾಡುತ್ತಾರೆ. ಅದರಲ್ಲಿ ವಿಳಂಬವಾಗಿದೆ ಎಂದು ನಾನು ಹೇಳುವುದಿಲ್ಲ. ಬೆಳಿಗ್ಗೆ ಆದೇಶವಾಗುತ್ತದೆ, ಸಂಜೆ ಹಸ್ತಾಂತರ ಕೂಡ ಆಗುತ್ತದೆ. ಆದರೆ ನನ್ನ ಪ್ರಶ್ನೆ ಏನೆಂದರೆ, ದಿನಾಂಕ 15.09.2005ರಂದು ಏನು ಸರ್ಕಾರಿ ಆದೇಶವಾಗಿದೆ, ಆ ಆದೇಶ ಇದುವರೆಗೂ ಕೂಡ ಜಾರಿಯಾಗಿಲ್ಲ. ಇದರಲ್ಲಿ ಬಹಳ ವಿಳಂಬವಾಗಿದೆ. ನಾನು ಈಗಾಗಲೇ ಹೇಳಿದಂತೆ, ಕೆಲವು ಐ.ಎ.ಎಸ್ ಅಧಿಕಾರಿಗಳು ಏನು ಇರುತ್ತಾರೋ, ಅವರೇ ಮಹಾ ಬುದ್ದಿವಂತರು ಎನ್ನತಕ್ಕಂಥ ಭಾವನೆ ಇದರಲ್ಲಿ ಬಂದು, ಒಂದು ಸಹಕಾರಿ ಸಂಸ್ಥೆಗೆ ತೊಂದರೆ ಮಾಡಿರತಕ್ಕಂಥದ್ದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಸಚಿವರ ಉತ್ತರದ ಕಡೇ ಪ್ಯಾರಾದಲ್ಲಿ ತ್ವರಿತವಾಗಿ ಲೆಕ್ಕಪತ್ರಗಳ returns file ಮಾಡಬೇಕೆಂದು ಏನು ಹೇಳುತ್ತಿದ್ದಾರೆ, ಅದು ಕೂಡಲೇ ಆಗಬೇಕಾಗಿದೆ. ಇದರ ಅನ್ವಯ ಏನು ಈಗಾಗಲೇ ಸಾಕಷ್ಟು

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ವಿಳಂಬವಾಗಿದೆ, ಮತ್ತೆ ಆ ವಿಳಂಬವನ್ನು ತಪ್ಪಿಸಲಿಕ್ಕೆ ಸಂಬಂಧಪಟ್ಟಂತಹ ಮಾನ್ಯ ಸಚಿವರು, ಆ ಒಂದು ಸಾರ್ವಜನಿಕ ಉದ್ದಿಮೆ ಇಲಾಖೆಯ ಅಧಿಕಾರಿಗಳು ಮತ್ತು ಆ ಒಂದು ಸಹಕಾರಿ ಸಂಸ್ಥೆಯ ಪದಾಧಿಕಾರಿಗಳನ್ನು ಕರೆಸಿ, ಆದಷ್ಟು ಜಾಗ್ರತೆ ಒಂದು ಸಭೆಯನ್ನು ನಡೆಸಿ, ಮತ್ತೆ ವಿಳಂಬವಾಗುವುದನ್ನು ತಪ್ಪಿಸಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಉತ್ತಮವಾದಂತಹ ಸಲಹೆಯನ್ನು ಕೊಟ್ಟಿದ್ದಾರೆ. ವಿಳಂಬಕ್ಕೆ ಈ ತರಹದ ಧೋರಣೆಗಳೇ ಕಾರಣವಾಗಿವೆ. ನಾನು ಖಂಡಿತವಾಗಿಯೂ ಕೂಡ ಸಂಬಂಧಪಟ್ಟಂತಹ ಮಂತ್ರಿಗಳಿಗೆ ಈ ವಿಷಯವನ್ನು ತಿಳಿಸಿ, ಸಾರ್ವಜನಿಕ ಉದ್ದಿಮೆಗಳ ಸಂಸ್ಥೆಯವರು ಕೂಡಲೇ ಬಗೆಹರಿಸಲಿಕ್ಕೆ ಕ್ರಮ ತೆಗೆದುಕೊಳ್ಳುತ್ತಾರೆಂದು ಹೇಳಬಯಸುತ್ತೇನೆ.

9. ಪ್ರಕಟಣೆ

ವಿಷಯ: ಶ್ರೀ ಸಿದ್ದರಾಮಯ್ಯನವರು ವಿಧಾನಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದ ದಿನಾಂಕ 18.7.06ರಂದು ಅಂಗೀಕರಿಸಲಾಗಿದೆ.